Arya Matha Sanjivini Series, 1.

ಆರ್ಯಮತಸಂಜೀವಿನಿ.

# ಅರ್ಥಪಂಚಕ

ಪಾಠಶಾಲೆಗಳ ಉಪಯೋಗಕ್ಕಾಗಿ
ವಿರಚಿತವಾದದ್ದು.

Edited and published
*by*
M. A. RAMANUJA IYENGAR,
HOSA AGRAHARAM, MYSORE.

ಮೈಸೂರು: ಸದ್ವಿದ್ಯಾಮಂದಿರಮುದ್ರಾಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು
೧೮೯೦.

# ಅರ್ಥ ಪಂಚಕೆ.

ಲಕ್ಷ್ಮೀನಾಥ ಸಮಾರಂಭಾಂ ನಾಥಯಾಮುನ ಮಧ್ಯಮಾಂ ।
ಅಸ್ಮದಾಚಾರ್ಯಪರ್ಯನ್ತಾಂ ವಂದೇಗುರು ಪರಂಪರಾಂ ॥
ಲೋಕಾಚಾರ್ಯಾಯ ಗುರವೆ ಕೃಷ್ಣಪಾದಸ್ಯ ಸೂನವೆ ।
ಸಂಸಾರ ಭೋಗಿ ಸಂದಷ್ಟ ಜೀವ ಜೀವಾತವೇ ನಮಃ ॥

ಸಂಸಾರಿಯಾದ ಚೇತನನಿಗೆ ತತ್ವಜ್ಞಾನವು ಹುಟ್ಟಿ, ಉಜ್ಜೀವಿಸುವಲ್ಲಿ, ಅರ್ಥಪಂಚಕ ಜ್ಞಾನವು ಅವಶ್ಯಕವು. ಅರ್ಥಪಂಚಕವೇನಂದರೆ :— ಸ್ವ ಸ್ವರೂಪ, ಪರಸ್ವರೂಪ, ಪುರುಷಾರ್ಥಸ್ವರೂಪ ಉಪಾಯ ಸ್ವರೂಪ, ವಿರೋಧಿ ಸ್ವರೂಪ- ಇವು ಐದನ್ನು ಯಥಾರ್ಥವಾಗಿ ತಿಳಿಯುವಿಕೆ. ಇವು ಐದರೊಳು ಒಂದೊಂದು ಐದು ಪ್ರಕಾರವಾಗಿ ಇರುವದು. ಅದರೊಳು ಮೊದಲುಹೇಳಿದ ಸ್ವಸ್ವರೂಪವೆಂಬುವದು, ಆತ್ಮಸ್ವರೂಪವು. ಅದು ನಿತ್ಯರೆಂದೂ, ಮುಕ್ತರೆಂದೂ, ಬದ್ಧರೆಂದೂ, ಕೇವಲರೆಂದೂ, ಮುಮುಕ್ಷುಗಳೆಂದೂ ಐದು ವಿಧವಾಗಿರುವದು. ಪರಸ್ವರೂಪವೆಂದರೆ :— ಅದು ಪರತ್ವವೆಂದೂ, ವ್ಯೂಹವೆಂದೂ, ವಿಭವವೆಂದೂ, ಅಂತರ್ಯಾಮಿತ್ವವೆಂದೂ, ಅರ್ಚಾವತಾರವೆಂದೂ ಐದು ಬಗೆಯಾಗಿರುವದು. ಪುರುಷರಿಂದ ವರ್ಧಿಸಲ್ಪಟ್ಟವು ಪುರುಷಾರ್ಥಗಳು. ಆ ಪುರುಷಾರ್ಥ ಸ್ವರೂಪವೇನಂದರೆ- ಧರ್ಮವೆಂದೂ. ಅರ್ಥವೆಂದೂ, ಕಾಮವೆಂದೂ, ಆತ್ಮಾನುಭವವೆಂದೂ ಭಗವದನುಭವವೆಂದೂ ಐದು ಪ್ರಕಾರವಾಗಿರುವದು. ಉಪಾಯಸ್ವರೂಪವೇನಂದರೆ- ಕರ್ಮವೆಂದೂ, ಜ್ಞಾನವೆಂದೂ, ಭಕ್ತಿಯೆಂದೂ, ಪ್ರಪತ್ತಿಯೆಂದೂ, ಆಚಾರ್ಯಾಭಿಮಾನವೆಂದೂ, ಐದು ವಿಧವಾಗಿರುವದು. ವಿರೋಧಿ ಸ್ವರೂಪವೇನಂದರೆ- ಸ್ವರೂಪವಿರೋಧಿ, ಪರತ್ವವಿರೋಧಿ, ಪುರುಷಾರ್ಥವಿರೋಧಿ, ಉಪಾಯವಿರೋಧಿ, ಪ್ರಾಪ್ಯವಿರೋಧಿ ಎಂದು, ಪಂಚವಿಧವಾಗಿ ಇರುವದು.

ಇಂಥಾ ಒಂದು ಅರ್ಥಕ್ಕೆ ಐದು ತೆರನಾದ ಅರ್ಥಪಂಚಕದೊಳಗೆ **ನಿತ್ಯರಾದವರು ಯಾರು? ಎಂದರೆ :—**

**ಒಂದು ಕ್ಷಣಕಾಲವಾದರೂ ಸಂಸಾರ ಸಂಬಂಧವೆಂಬ ಈ ದೋಷವಿಲ್ಲದೆ ನಿರವದ್ಯರೂಪರಾಗಿಯೂ, ಭಗವದನುಭವಾನುಕೂ**

ರ್ಯೈಕಭೋಗಿಗಳಾಗಿಯೂ, ಶ್ರೀ ವೈಕುಂಠನಾಥನಿಗೆ ಪಟ್ಟಾಭಿಷೇಕವನ್ನು ಮಾಡಲು ಯೋಗ್ಯರಾಗಿಯೂ, ಶ್ರಿಯಃಪತಿಯಾದ ನಾರಾಯಣಸ್ವಾಮಿಯ ಆಜ್ಞೆಯಿಂದ ಸೃಷ್ಟಿಸ್ಥಿತಿಲಯಗಳ ನಿರ್ಮಾಣದಲ್ಲಿ ಶಕ್ತರಾಗಿಯೂ, ಪರವ್ಯೂಹ ವಿಭವಾದಿ ಸರ್ವಾವಸ್ಥೆಗಳಲ್ಲಿಯೂ ಈಶ್ವರನನ್ನು ಬಿಡದೆ ಸಿಲುಕಿ ಸೇವೆಗಳ ಮಾಡುವವರಾಗಿಯೂ, ಸಕಲಲೋಕದಲ್ಲಿಯೂ ಶ್ರೀಮನ್ನಾರಾಯಣನ ಸೇವಕರಾದ ವಿಷ್ವಕ್ಸೇನಾದಿಗಳೇ ನಿತ್ಯರು.

ಮುಕ್ತರು ಯಾರೆಂದರೆ :— ಪ್ರಕೃತಿ ಸಂಬಂಧದಿಂದ ಬಂಧಮುಕ್ತಿಯನ್ನು ಭಗವದನುಗ್ರಹದಿಂದಲೇ ತೊಲಗಿ, ಶ್ರಿಯಃಪತಿಯಾದ ನಾರಾಯಣನ ಸ್ವರೂಪವನ್ನೂ ಅವನ ಕಲ್ಯಾಣಗುಣಗಳನ್ನೂ ನಿತ್ಯವಿಲಾಸರೂಪವಾದ ವಿಭೂತಿಗಳನ್ನೂ ಅನುಭವಂಗೈದು, ಪೂರ್ಣವಾದ ತಟಾಕವು ಉದಕದಿಂದ ತುಂಬಿ ಹೊರಹೊಮ್ಮುವಂತೆ, ಅನುಭವೈಕಮಾತ್ರದಿಂದಿರದೆ, ಬಾಹ್ಯದೊಳು ಬಾಯ್ದಣಿಯೆ ಸ್ತೋತ್ರವನ್ನು ಮಾಡಿ, ಶ್ರೀ ವೈಕುಂಠನಾಥನಾದ ಶ್ರೀಮನ್ನಾರಾಯಣನ ಅನುಭವದಿಂದಲೇ ಪರಮಾನಂದಾಬ್ಧಿಯಲ್ಲಿ ಓಲಾಡುತ್ತಿರುವ ಸನಕಾದಿಮುನಿಗಳೇ ಮುಕ್ತರು.

ಬದ್ಧರು ಆರೆಂದರೆ :— ಪಾಂಚಭೌತಿಕವಾಗಿ, ಅನಿತ್ಯವಾಗಿ, ಸುಖದುಃಖಾದ್ಯನುಭವಗಳಿಗೆ ಎಡೆಯಾಗಿ, ಆತ್ಮ ವಿಶೇಷದಿಂದ ದರ್ಶನಸ್ಪರ್ಶನಯೋಗ್ಯವಾಗದಂತೆ ಅಪವಿತ್ರಾಸ್ಪದವಾಗಿ, ಅಜ್ಞಾನವನ್ನು ಅನ್ಯಥಾ ಜ್ಞಾನವನ್ನೂ, ವಿಪರೀತಜ್ಞಾನವನ್ನು ಹುಟ್ಟಿಸುವ ಈ ದೇಹವೇ ಆತ್ಮನಾಗಿ, ಶಬ್ದ ಮೊದಲಾದ ವಿಷಯಾನುಭವದಿಂದ ಜನಿತವಾದ ಸ್ವದೇಹಪೋಷಣವೆಂಬುವದೇ ಪುರುಷಾರ್ಥವಾಗಿ, ಶಬ್ದವೆ ಮೊದಲಾದ ವಿಷಯಲಾಭಕ್ಕೋಸ್ಕರವೆ ವರ್ಣಾಶ್ರಮಧರ್ಮಗಳನ್ನು ಮೀರಿ, ಇತರ ಭಜನೆಗೆ ಮನವೆಳಸಿ, ಪರಸ್ತುತಿಗೈದು, ಪ್ರಾಣಿಹಿಂಸೆಗಳನ್ನು ಮಾಡಿ, ಪರದಾರ ಪರದ್ರವ್ಯ ಸಂಗ್ರಹವನ್ನು ಲೀಲೆಯಿಂದಲೇ ಮಾಡಿ; ಅನೇಕ ಅನೃತ ವಚನಗಳನ್ನು ವ್ಯರ್ಥವಾಗಿಯೇ ನುಡಿದು, ಶಾಸ್ತ್ರವಿರೋಧಗಳಾದ ಆಹಾರಗಳನ್ನು ಕೈಕೊಂಡು, ಸಂಸಾರವನ್ನೇ ವೃದ್ಧಿಹೊಂದಿಸುವರಾಗಿ, ಭಗವದನುಗ್ರಹವಿಮುಖರಾಗಿ ಇರುವ ಜೀವರಾಶಿಗಳೇ ಬದ್ಧರು.

(೪) ಕೇವಲರಾರುಂದರೆ:— ಬಂದಾನೊಂದು ಏಕಾಂತ ದೇಶದಲ್ಲಿ ಕ್ಷುತ್ಪಿಪಾಸೆಗಳಿಂದ ಬಹುನೊಂದು ಭಕ್ಷ್ಯಾಭಕ್ಷ್ಯವಿವೇಕವಿಲ್ಲದೆ ತನ್ನ ದೇಹವನ್ನು ತಾನೇ ಕೊಯಿದುಂಡು ಸಂತಸಂಗೈವ ಮನುಜನಂತೆ; ಸಂಸಾರದವಾನಲದಿಂದ ತಪ್ತನಾದ ಮನುಜನು ಸಂಸಾರದುಃಖನಿವೃತ್ತಿಯನ್ನು ಮಾಡುವದಕ್ಕೆ ಶಾಸ್ತ್ರಜನ್ಯಜ್ಞಾನದಿಂದ ಪ್ರಕೃತ್ಯಾತ್ಮವಿವೇಕವಂ ಮಾಡಿ; ಪ್ರಕೃತಿಯು ದುಃಖಾಶ್ರಯವಾಗಿ ಹೇಯಪದಾರ್ಥಸಮುದಾಯವಾಗಿರುವದೆಂದೂ, ಆತ್ಮನು ಪ್ರಕೃತಿಗಳಿಗೆ ವಿಲಕ್ಷಣನಾಗಿಯೂ ಸ್ವಯಂಪ್ರಕಾಶನಾಗಿಯೂ ಸ್ವತಸ್ಸುಖಿಯಾಗಿಯೂ ನಿತ್ಯನಾಗಿಯೂ ಅಪ್ರಾಕೃತನಾಗಿಯೂ ಇರುತ್ತಾನೆಂದೂ, ತಿಳಿದು; ಪೂರ್ವಾನುಭೂತವಾದ ಸಂಸಾರದುಃಖಾತಿಶಯವನ್ನು ನೆನನೆನದು, ಆತ್ಮಭೋಗವಾದ ಅಲ್ಪರಸದಲ್ಲಿ ಮುಳುಗಿ, ಜ್ಞಾನಾನಂದಸ್ವರೂಪವಾದ ಪರಮಾತ್ಮವಿವೇಕ ಸಾಲದೆ, ಆನಂದಪ್ರವಾಹವಾಗಿ ಜ್ಞಾನಯೋಗವಾಗಿರುವ ಭಗವದನುಭವವನ್ನು ಅರಿಯದೆ, ಆತ್ಮಪ್ರಾಪ್ತಿಗೆ ಸಾಧನವಾದ ಜ್ಞಾನಯೋಗದಲ್ಲಿ ನಿಷ್ಠೆಯುಳ್ಳವನಾಗಿ, ಯೋಗಫಲವಾದ ಆತ್ಮಾನುಭವನ್ನು ಮಾತ್ರವೇ ತನಗೆ ಪುರುಷಾರ್ಥವಾಗಿ ಅನುಭವಂಗೈದು, ಬಳಿಕ ಸಂಸಾರಸಂಬಂಧವೂ ಭಗವತ್ಪ್ರಾಪ್ತಿಯೂ ಯಾವದಾತ್ಮಭಾವಿ ದೇಹವೂ ಇಲ್ಲದೆ ಬರಿದೆ ತಿರುಗುವರು ಕೇವಲರು.

(೫) ಮುಮುಕ್ಷುಗಳು ಯಾರೆಂದರೆ:— ಮೋಕ್ಷದಲ್ಲಿ ಇಚ್ಛೆಯುಳ್ಳವರು ಮುಮುಕ್ಷುಗಳು. ಅವರು ಉಪಾಸಕರೆಂದೂ ಪ್ರಪನ್ನರೆಂದೂ ಎರಡು ವಿಧವಾಗಿರುವರು. ಅವರಲ್ಲಿ ಉಪಾಸಕರು– ಇತರಾಪೇಕ್ಷೆಯಿಲ್ಲದೆ ಸ್ವಯತ್ನದಿಂದ ಮೋಕ್ಷಕ್ಕೆ ಎಳಸುವವರು. ಪ್ರಪನ್ನರು– ಸ್ವಯತ್ನವಿಲ್ಲದೆ ತಮ್ಮ ಆಚಾರ್ಯನನ್ನು ಪುರುಷಕಾರವಾಗಿ ಭಜಿಸಿ, ಶ್ರಿಯಃಪತಿಯಾದ ನಾರಾಯಣನ ಅವ್ಯಾಜಕೃಪೆಯೇ ತಮಗೆ ಉಪಾಯವಾಗಿ, ಶ್ರೀಮನ್ನಾರಾಯಣನ ದಿವ್ಯಚರಣಾರವಿಂದವ ಸೇವೆಯೇ ಪರಮಪುರುಷಾರ್ಥವಾಗಿ ಮನಗೊಳಿಸಿ, ಇತರೋಪಾಯರಹಿತರಾಗಿ, ಶ್ರೀಮನ್ನಾರಾಯಣನ ಅವ್ಯಾಜಕೃಪೆಯಲ್ಲಿಯೇ ನಿರ್ಭರರಾಗಿ ಇರುವವರು ಪ್ರಪನ್ನರು.

---

೨ – ಈಶ್ವರವಿಷಯದಲ್ಲಿ,

[೧] ಪರತ್ವವೆಂದರೆ? ಅನಾದಿಯಾಗಿ ನಿರವಧಿಕಜ್ಯೋತಿರ್ಮ್ಮಯ ನಾಗಿ ಪರಮಪದದಲ್ಲಿ ನೆಲಸಿರುವ ಪರವಾಸುದೇವನು, ಪರತ್ವವು.

[೨] ವ್ಯೂಹವೆಂದರೆ? ಸೃಷ್ಟಿಸ್ಥಿತಿಸಂಹಾರಗಳಿಗೆ ಕರ್ತ್ತರಾದ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರು ವ್ಯೂಹವು.

[೩] ವಿಭವವೆಂದರೆ? ರಾಮಕೃಷ್ಣಾದ್ಯವತಾರಗಳು ವಿಭವವು.

[೪] ಅಂತರ್ಯಾಮಿತ್ವವೆಂಬುವದು ಎರಡುವಿಧವಾಗಿರುವದು. ಅದೇ ನೆಂದರೆ? ಜ್ಞಾನಿಗಳ ಹೃದಯಕಮಲದಲ್ಲಿ ಲಕ್ಷ್ಮೀಸಮೇತನಾಗಿ ವಿಲಕ್ಷಣವಿಗ್ರಹವುಳ್ಳವನಾಗಿ ಕರ್ಮಸಾಕ್ಷಿಯಾಗಿ ನೆಲಸಿರುವದೆಂಬುವ ದು ಒಂದುಬಗೆ. ಜ್ಞಾನಿಗಳಿಗೆ ಇತರರಾದ ಸಾಮಾನ್ಯರ ಆತ್ಮಗಳಲ್ಲಿ ಸ್ವರೂಪಮಾತ್ರದಿಂದ ಇರುವದು ಮತ್ತೊಂದುಬಗೆ. ಇದು ಅಂತ ರ್ಯಾಮಿತ್ವವು.

[೫] ಅರ್ಚಾವತಾರವೆಂದರೆ? ಸರ್ವೇಶ್ವರನಾದ ಶ್ರೀಮನ್ನಾರಾ ಯಣನು ಭಕ್ತರು ಯಾವ ಮೂರ್ತಿಯನ್ನು ಬಯಸುವರೋ ಆ ಮೂರ್ತ್ತಿಯಾಗಿ, ಯಾವಹೆಸರನ್ನು ಪಡೆದು ಭಾವಿಸುವರೋ ಆ ಹೆ ಸರಿಗೆ ವಿಷಯನಾಗಿ, ಸರ್ವಜ್ಞನಾದರೂ ಅಜ್ಞನೆಂತೆಯೂ ಸರ್ವ ಶಕ್ತಿಮಂತನಾದರೂ ಅಶಕ್ತನೆಂತೆಯೂ ಅವಾಪ್ತಸಮಸ್ತಕಾಮ ನಾದರೂ ಆಶೆಯುಳ್ಳವನೆಂತೆಯೂ ರಕ್ಷಕನು ತಾನಾದರೂ ರಕ್ಷ್ಯನೆಂ ತೆಯೂ ಆಗಿ; ತಾನು ಸರ್ವರಿಗೆ ಒಡೆಯನಾಗಿದ್ದರೂ ಭಕ್ತಪರಾಧೀನ ನಾಗಿಯೂ, ಸರ್ವರಿಗೂ ದೃಷ್ಟಿಗೋಚರನಾಗಿಯೂ, ಸರ್ವಸುಲಭ ನಾಗಿಯೂ, ಗುಡಿ ಮನೆ ದಿವ್ಯದೇಶ ಮೊದಲಾದ ಸ್ಥಳಗಳಲ್ಲಿ ಸರ್ವ ಕಾಲದಲ್ಲಿಯೂ ಬಿಜಯಂಗೈದಿರುವ ರೀತಿಯು ಅರ್ಚಾವತಾರವೆಂ ಬುವದು.

೩ – ಪುರುಷಾರ್ಥದೊಳು,

(೧) ಧರ್ಮವೆಂದರೆ? ಪ್ರಾಣಿಗಳ ರಕ್ಷಣಕ್ಕಾಗಿ ಮಾಡುವ ವೃತ್ತಿ ವಿಶೇಷಗಳು ಧರ್ಮವು.

(೨) ಅರ್ಥವೆಂದರೆ:— ವರ್ಣಾಶ್ರಮೋಚಿತವಾಗಿ ಧನಧಾನ್ಯಾದಿಗಳನ್ನು ಸಂಗ್ರಹಿಸಿ, ದೇವತಾ ಗುರು ಪ್ರಾಣಿಗಳ ವಿಷಯಗಳಲ್ಲಿ ಉತ್ಕೃಷ್ಟ ದೇಶ ಕಾಲ ಪಾತ್ರಗಳ ವಿವೇಚನೆಯನ್ನು ಮಾಡಿ, ಧರ್ಮಬುದ್ಧಿಯಿಂದಲೇ ಕೊಡುವದು ಅರ್ಥವೆಂಬುವದು.

[೩] ಕಾಮವೆಂದರೆ? ಐಹಲೌಕಿಕವೆಂದೂ, ಪಾರಲೌಕಿಕವೆಂದೂ ದ್ವಿವಿಧವಾಗಿರುವದು, ಅದರೊಳು ಐಹಲೌಕಿಕವೆಂದರೆ, ಮಾತೃ ಪಿತೃ ರತ್ನಧನಧಾನ್ಯ ವಸ್ತ್ರಾನ್ನಪಾನ ಪುತ್ರ ಮಿತ್ರ ಕಳತ್ರ ಪಶುಗೃಹಕ್ಷೇತ್ರ ಚಂದನ ಕುಸುಮ ತಾಂಬೂಲಾದಿ ವಸ್ತುಗಳಲ್ಲಿ ಶಬ್ದಾದಿ ವಿಷಯಾನುಭವದಿಂದ ಬರುವ ಸುಖವಿಶೇಷಗಳೇ ಐಹಲೌಕಿಕ ಕಾಮವೆಂಬುವದು. ಪಾರಲೌಕಿಕವೆಂದರೆ:— ಐಹಿಕಕಾಮಗಳಿಗತಿಶಯವಾಗಿ; ತೇಜೋರೂಪವಾಗಿರುವ ಸ್ವರ್ಗಾದಿ ಲೋಕಗಳನ್ನು ಹೊಕ್ಕು, ಹಶಿವು ದಾಹ ಶೋಕ ಮೋಹ ಜರಾಮರಣಗಳು ಇಲ್ಲದೆ, ಸುಕೃತಾನುಗುಣವಾಗಿ ಅಮೃತಪಾನಗಳನ್ನು ಮಾಡಿ, ಅಲ್ಲಿ ಅಪ್ಸರಸ್ತ್ರೀಯರನ್ನು ಕೂಡಿ, ಶಬ್ದಾದಿ ವಿಷಯಾನುಭವದಿಂದ ಸುಖಿಸುತ್ತಿರುವದು ಪಾರಲೌಕಿಕಕಾಮವೆಂಬುವದು.

[೪] ಆತ್ಮಾನುಭವವೆಂದರೆ? ದುಃಖನಿವೃತ್ತಿ ಮಾತ್ರದಿಂದಲೇ ಸಾಫಲ್ಯವಾದ ಕೇವಲಾತ್ಮಾನುಭವವನ್ನು ಮೋಕ್ಷವೆಂದು ಕೆಲವರು ಹೇಳುವರು. ಆ ಕೇವಲಾತ್ಮಾನುಭವವೇ ಆತ್ಮಾನುಭವವೆಂದು ಎಣಿಸಿಕೊಳ್ಳುವದು.

[೫] ಭಗವದನುಭವ ರೂಪವಾದ ಪರಮಪುರುಷಾರ್ಥ ಲಕ್ಷಣ ಮೋಕ್ಷವು ಯಾವದೆಂದರೆ? ಪ್ರಾರಬ್ಧಕರ್ಮದಿಂದುಳಿಮೆಯುಂಟಾಗಿ, ಅವಶ್ಯಕವಾಗಿ ಅನುಭಾವ್ಯವಾಗಿರುವ ಪುಣ್ಯಪಾಪಗಳು ವಿಶೇಷವಾಗಿ ಲಯಿಸಿ, ಷಡ್ಭಾವ ವಿಕಾರಗಳಿಗೆ ಆಸ್ಪದವಾಗಿಯೂ ತಾಪತ್ರಯಗಳಿಗೆ ಆಶ್ರಯವಾಗಿಯೂ ಭಗವತ್ಸ್ವರೂಪವನ್ನು ಮರೆಯಿಸಿ ವಿಪರೀತಜ್ಞಾನವನ್ನು ಹುಟ್ಟಿಸಿ ಸಂಸಾರವನ್ನು ಹೆಚ್ಚಿಸುವ ಈ ಸ್ಥೂಲಶರೀರವನ್ನು ಉಪೇಕ್ಷೆಯಿಂದಲೇ ಬಿಟ್ಟು, ಸುಷುಮ್ನೆಯೆಂಬ ನಾಡಿಯಿಂದಲೇ ಶಿರಃಕಪಾಲವನ್ನು ಭೇದಿಸಿ ಹೊರಟು, ಬಳಿಕ ಸೂಕ್ಷ್ಮಶರೀರದಿಂದ ಸೂರ್ಯಮಂಡಲವನ್ನು ಭೇದಿಸಿ, ಅರ್ಚಿರಾದಿ ಮಾರ್ಗದಿಂದ

ಗಮಿಸಿ, ಬಳಿಕ ವಿರಜಾನದೀಸ್ನಾನದಿಂದ ವಾಸನಾ ಲೇಶವನ್ನೂ ಸೂಕ್ಷ್ಮಶರೀರವನ್ನೂ ತೊಲಗಿಸಿ, ಸಕಲತಾಪಹರವಾದ ಅಮಾನವ ಕರಸ್ಪರ್ಶವನ್ನು ಹೊಂದಿ, ಶುದ್ಧಸತ್ವವಾಗಿಯೂ ಪಂಚೋಪನಿಷತ್ಸ್ವರೂಪವಾಗಿಯೂ ಜ್ಞಾನಾನಂದಜನಕವಾಗಿಯೂ ಭಗವದನುಭವೈಕಯೋಗ್ಯವಾಗಿಯೂ ಅತಿತರಜ್ಯೋತಿರ್ಮಯವಾಗಿಯೂ ಇರುವ ಅಪ್ರಾಕೃತವಿಗ್ರಹವನ್ನು ಅಂಗೀಕರಿಸಿ, ಕಿರೀಟ ಮೊದಲಾದ ದಿವ್ಯಭೂಷಣಭೂಷಿತರಾದ ನಿತ್ಯಸೂರಿಗಳನ್ನು ಇದಿರ್ಗೊಂಡು, ದಿವ್ಯೋಪಚಾರಗಳನ್ನು ಸ್ವೀಕರಿಸಿ, ಬಳಿಕ ನಿರತಿಶಯಾನಂದಮಯವಾಗಿರುವ ಒಂದು ದಿವ್ಯ ಮಂಟಪವನ್ನು ಹೊಕ್ಕು; ಶ್ರೀಭೂಮಿ ನೀಳಾಸಮೇತನಾಗಿ, ವಿಲಕ್ಷಣ ವಿಗ್ರಹಯುಕ್ತನಾಗಿ, ಕೋಟಿಸೂರ್ಯಪ್ರಕಾಶನಾಗಿ, ನಿರವಧಿಕ ತೇಜೋರೂಪವಾದ ಸಹಸ್ರ ಫಣಾಮಣಿಗಳಿಂದೊಪ್ಪುವ ಅನಂತ ಸಿಂಹಾಸನದಲ್ಲಿ ಬಿಜಯಂಗೈದಿರುವ ಶ್ರೀಮನ್ನಾರಾಯಣನನ್ನು ನಿತ್ಯಾನುಭವಂಗೈಯುತ, ನಿತ್ಯಕಿಂಕರಸ್ವಭಾವನಾಗಿರುವಿಕೆಯೇ ಭಗವದನುಭವರೂಪವಾದ ಮೋಕ್ಷವು.

---

೪ — ಉಪಾಯಗಳಲ್ಲಿ,

(೧) ಕರ್ಮಯೋಗವೆಂದರೆ ? ಯಜ್ಞ ದಾನ ತಪೋ ಧ್ಯಾನ ಸಂಧ್ಯಾವಂದನ ಪಂಚಮಹಾಯಜ್ಞಾಗ್ನಿಹೋತ್ರ ತೀರ್ಥಯಾತ್ರ ಪುಣ್ಯಕ್ಷೇತ್ರವಾಸ ಕೃಚ್ಛ್ರ ಚಾಂದ್ರಾಯಣ ಪುಣ್ಯನದೀಸ್ನಾನ ವ್ರತ ಚಾತುರ್ಮಾಸ್ಯ ಫಲಮೂಲಾಶನ ಶಾಸ್ತ್ರಾಭ್ಯಾಸ ಸಮಾರಾಧನ ಜಪ ತಪ ತರ್ಪಣಾದಿ ಕರ್ಮಾನುಷ್ಠಾನಗಳಿಂದುಂಟಾದ ಕಾಯಶೋಷಣದಿಂದ ಪಾಪನಾಶನವುಂಟಾಗಿ, ಅದರಿಂದ ಇಂದ್ರಿಯದ್ವಾರಾ ಪ್ರಸರಿಸುವ ಧರ್ಮಭೂತಜ್ಞಾನಕ್ಕೆ ಶಬ್ದಾದಿಗಳು ಗೋಚರವಾಗದೇ ಇರುವದರಿಂದ ವಿಷಯಸಾಪೇಕ್ಷೆಯು ಹಟ್ಟಿ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿರೂಪವಾದ ಅಷ್ಟಾಂಗಯೋಗಕ್ರಮದಿಂದ ಯೋಗಾಭ್ಯಾಸ ಕಾಲದವರಿಗೂ ಜ್ಞಾನಕ್ಕೆ ಆತ್ಮನನ್ನು ವಿಷಯವಾಗಿ ಮಾಡುವಿಕೆ. ಇದೇನೆ ಜ್ಞಾನಯೋಗಕ್ಕೆ ಸಹಕಾರಿಯಾಗಿಯೂ ಐಶ್ವರ್ಯಗಳಿಗೆ ಪ್ರಧಾನಸಾಧನವಾಗಿಯೂ ಇರುವದು.

(೨) ಜ್ಞಾನಯೋಗವೆಂದರೆ? ಈ ಪರಿ ಯೋಗಜನ್ಯವಾದ ಜ್ಞಾನಕ್ಕೆ ಹೃದಯಕಮಲ ಆದಿತ್ಯಮಂಡಲ ಮೊದಲಾದ ಸ್ಥಳವಿಶೇಷಗಳಲ್ಲಿ ಬಿಜಯಂಗೈದಿರುವ ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು ವಿಷಯವು ಮಾಡಿ, ಆ ವಿಷಯವನ್ನೇ ಶಂಖ ಚಕ್ರ ಗದಾ ಧರನಾಗಿಯೂ, ಪೀತಾಂಬರಧಾರಿಯಾಗಿಯೂ, ಕಿರೀಟ ಮಕುಟ ಚೂಡಾವತಂಸ ಮಕರಕುಂಡಲ ಗ್ರೈವೇಯಕ ಹಾರ ಕೇಯೂರ ಶ್ರೀವತ್ಸ ಕೌಸ್ತುಭ ಮುಕ್ತಾ ದಾಮೋದರ ಬಂಧನ ಪೀತಾಂಬರ ಕಾಂಚೀಗುಣ ನೂಪುರಾದ್ಯಪರಿಮಿತ ದಿವ್ಯಭೂಷಣ ಭೂಷಿತವಾಗಿಯೂ, ಲಕ್ಷ್ಮೀಸಹಿತವಾಗಿಯೂ, ಯೋಗಾಭ್ಯಾಸಕ್ರಮದಿಂದ ಅನುಭವ ಗೈದು, ಅನವರತಭಾವನೆಗೆ ಆಸ್ಪದವಾಗಿ ಮಾಡುವಿಕೆಯೇ ಜ್ಞಾನಯೋಗವೆಂಬುದು. ಇದೇ ಭಕ್ತಿಯೋಗಕ್ಕೆ ಸಹಕಾರಿಯಾಗಿ, ಕೈವಲ್ಯಮೋಕ್ಷಕ್ಕೆ ಪ್ರಧಾನಸಾಧನವಾಗಿರುವದು.

(೩) ಭಕ್ತಿಯೋಗವೆಂದರೆ? ಈ ಪರಿಯ ತೈಲಧಾರಾವದವಿಚ್ಛಿನ್ನ ಸ್ಮೃತಿಸಂತಾನ ರೂಪವಾದ ಅನುಭವವನ್ನು ಪ್ರೀತಿರೂಪಾಪನ್ನವಾಗಿ ಮಾಡಿಸಿ, ಅದರಿಂದ ಪ್ರಾರಬ್ಧಕರ್ಮವು ಪರಿಹರಿಸಿ, ಬಳಿಕ ಸಾಧನ ಸಾಧ್ಯಗಳನ್ನು ಸಂಬಂಧಿಸಿ, ಅವರ ಸಂಕೋಚ ವಿಕಾಸವಾಗುವಂತೆ ಪರಿಣಮಿಸಿ ಇರುವದೇ ಭಕ್ತಿಯೋಗವೆನಿಸುವುದು.

(೪) ಪ್ರಪತ್ತಿಯೆಂದರೆ? ಈ ರೀತಿಯ ಕರ್ಮಯೋಗಜ್ಞಾನಯೋಗಸಹಕೃತವಾದ ಭಕ್ತಿಯೋಗದಲ್ಲಿ ಅಶಕ್ತನಾಗಿರುವವನಿಗೂ, ಸ್ವಪ್ರವೃತ್ತಿರೂಪವಾದ ಭಕ್ತಿಯು ಸ್ವರೂಪವಿರುದ್ಧವೆಂಬದಾಗಿ ಜ್ಞಾನವುಳ್ಳ ಅತ್ಯಂತ ಪರತಂತ್ರನಾದ ನರನಿಗೂ ಸುಕರವಾಗಿಯೂ, ಶೀಘ್ರಫಲಪ್ರದವಾಗಿಯೂ, ಈ ಉಪಾಯವು ಸಕೃತ್ತಾದ್ದರಿಂದ ಉಪಾಯಾನುಷ್ಠಾನ ಸಮನಂತರವಾಗುವ ಭಗವದ್ವಿಷಯಾನುಭವಗಳೆಲ್ಲವೂ ಇವನಿಗೆ ಪ್ರಾಪ್ಯಕೋಟಿಘಟಿತವಾಗುವದರಿಂದ ಸ್ವರೂಪಾನುರೂಪವಾಗಿಯೂ ಇರುವದೇ ಪ್ರಪತ್ತಿಯೆಂಬುವದು. ಅದು ಆರ್ತಪ್ರಪತ್ತಿಯೆಂದೂ, ದೃಪ್ತಪ್ರಪತ್ತಿಯೆಂದೂ ದ್ವಿವಿಧವಾಗಿರುವದು. ಆರ್ತಪ್ರಪತ್ತಿಯೆಂದರೆ? ನಿರ್ವ್ಯಾಜಭಗವತ್ಕಟಾಕ್ಷ ಹೇತುಕವಾಗಿ, ಬರುವ ಸದಾಚಾರ್ಯೋಪದೇಶದಿಂದ ತತ್ವಜ್ಞಾನವು ಹುಟ್ಟಿದಾಗಲೇ;

ಅಗ್ನಿಮಧ್ಯಗತಕ್ರಿಮಿಕೀಟದಂತೆ, ನದೀತಟದಲ್ಲಿರುವ ವೃಕ್ಷದಂತೆ, ಪ್ರ
ವಾಹಮಧ್ಯಗತವಾಗಿ ತಿಟ್ಟಿಗೆ ಶಿಕ್ಕಿದ ನರಿಯು ಬಾಯಿಬಿಡುವಂತೆ, ಹು
ಲಿಯ ಬಾಯಲ್ಲಿ ಶಿಕ್ಕಿದ ರಾಜಕುಮಾರನಂತೆ, ಸರ್ಪದಬಾಯಿಗೆ ಶಿಕ್ಕಿದ
ಕಪ್ಪೆಯಂತೆ ಭಗವದನುಭವಕ್ಕೆ ವಿರೋಧವಾದ ದೇಹಸಂಬಂಧವೂ,
ದೇಶಸಂಬಂಧವೂ, ಸಂಸಾರಿಗಳ ಸಂಬಂಧವೂ ದುಸ್ಸಹವಾಗಿ, ಭಗ
ವದನುಭವಕ್ಕೂ ಅನುಕೂಲವಾದಂತೆ ವಿಲಕ್ಷಣವಾದ ದೇಹವನ್ನೂ
ಅಪ್ರಾಕೃತವಾದ ಪರಮಪದವನ್ನೂ ಅಲ್ಲಿರುವ ನಿತ್ಯಸೂರಿಗಳನ್ನೂ
ಐದಲ್ಕೆ ತವಕಿಸಿ, ಜನ್ಮಜರಾಮರಣಾಧಿವ್ಯಾಧಿಗಳನ್ನು ಹೋಗಲಾಡಿಸು
ವದಕ್ಕೆ ಉಪಾಯಭೂತನೇ ಸ್ವಾಮಿಯಾದ್ದರಿಂದ ಅವನ ಚರಣಾರವಿಂ
ದವನ್ನೇ ಉಪಾಯಾಂತರಶೂನ್ಯನಾಗಿ ಸಾಧನವಾಗಿ ಅನುಸಂಧಿಸಿ “ಸ್ವಾ
ಮೀ! ನಿನ್ನ ಪಾದಾರವಿಂದಗಳನ್ನು ಶೇರುವಂತೆ ಕರುಣಿಸಬೇಕೆಂದು, ಲ
ಕ್ಷ್ಮೀಯಾಣೆ ಇನ್ನು ನಿನ್ನ ಹೋಗಗೊಳಿಸೆನು.” ಎಂದು ಅವನನ್ನು ನಿ
ರ್ಬಂಧಿಸಿ ಅಡ್ಡಬಳಸಿ, ಪಾದಾರವಿಂದವೇ ಗತಿಯೆಂದು ಶರಣುಹೊಗುವ
ದೇ ಆರ್ತಪ್ರಪತ್ತಿಯೆಂಬುದು. ದೃಪ್ತಪ್ರಪತ್ತಿಯೆಂದರೆ? ಶರೀರಾಂತ
ರಪ್ರಾಪ್ತಿಯಲ್ಲಿಯೂ ಸ್ವರ್ಗನರಕಾದ್ಯನುಭವಗಳಲ್ಲಿಯೂ ವಿರಕ್ತಿಯೂ
ಭೀತಿಯೂ ಹುಟ್ಟಿ, ಅದರ ನಿವೃತ್ತಿಗೂ ಭಗವತ್ಪ್ರಾಪ್ತಿಗೂ ಕಾರಣ
ವಾದ ಸದಾಚಾರ್ಯೋಪದೇಶಕ್ರಮದಿಂದ ಶ್ರೀಮನ್ನಾರಾಯಣನ ದಿವ್ಯ
ಚರಣಾವಿಂದದೊಳುಪಾಯಸ್ವೀಕಾರವಂಗೈದು, ವಿಪರೀತವ್ಯಾಪಾರದ
ಲ್ಲಿ ನಿವೃತ್ತನಾಗಿ, ವೇದವಿಹಿತವಾದ ವರ್ಣಾಶ್ರಮಾನುಗುಣವಾದ ನಡತೆ
ಗಳನ್ನೂ ಭಗವದ್ಭಾಗವತ ಸೇವೆಗಳನ್ನೂ ಮನೋವಾಕ್ಕಾಯಗಳಿಂ
ದ ಯಥಾಶಕ್ತಿ ನಡೆಸುತ್ತಾ; ಬಳಿಕ ಶೇಷಿಯಾಗಿಯೂ, ನಿಯಂತೃವಾ
ಗಿಯೂ, ಸ್ವಾಮಿಯಾಗಿಯೂ, ಶರೀರಿಯಾಗಿಯೂ, ವ್ಯಾಪಕನಾಗಿ
ಯೂ, ಧಾರಕನಾಗಿಯೂ, ರಕ್ಷಕನಾಗಿಯೂ, ಭೋಕ್ತಾವಾಗಿಯೂ,
ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಸರ್ವಸಂಪೂರ್ಣನಾಗಿ
ಯೂ, ಅವಾಪ್ತಸಮಸ್ತಕಾಮನಾಗಿಯೂ ಇರುವ ಶ್ರಿಯಃಪತಿ
ಯಾದ ನಾರಾಯಣನ ಸ್ವರೂಪವನ್ನೂ; ಅವನಿಗೆ ಶೇಷವಾಗಿಯೂ,
ನಿಯಾಮ್ಯನಾಗಿಯೂ, ಸ್ವಂ ಆಗಿಯೂ, ಶರೀರವಾಗಿಯೂ, ವ್ಯಾ
ಪ್ಯನಾಗಿಯೂ, ಧಾರ್ಯನಾಗಿಯೂ, ರಕ್ಷ್ಯನಾಗಿಯೂ, ಭೋಗ್ಯನಾಗಿ
ಯೂ, ಅಜ್ಞನಾಗಿಯೂ, ಅಶಕ್ತನಾಗಿಯೂ, ಅಪೂರ್ಣನಾಗಿ

ಯುಾ, ಸಾಪೇಕ್ಷನಾಗಿಯುಾ ಇರುವ ತನ್ನಸ್ವರೂಪವನ್ನೂ; ಅಡಿಗಡಿಗೆ ಮನನಮಾಡಿ, ‘ ಈ ಸಂಸಾರದುಃಖವು ಪರಿಹರಿಸಿದರೂ ಇಲ್ಲದಿದ್ದರೂ ನೀನೇ ಗತಿ, ನನಗೆ ಮತ್ತೊಂದುಗತಿಯಿಲ್ಲ ’ ಎಂಬ ಉಪಾಯದಿಂದ ಸಕಲಭಾರವನ್ನು ಅವನ ಪಾದಾರವಿಂದದಲ್ಲಿ ಇರಿಸಿ, ಹೊರೆಇಳಿಕಿದವನಂತೆ, ನಿರ್ಭರನಾಗಿರುವದೇ ದೃಪ್ತಪ್ರಪತ್ತಿಯೆಂಬುದು.

(೫) ಆಚಾರ್ಯಾಭಿಮಾನವೆಂದರೆ? ಪೂರ್ವೋಕ್ತವಾದ ಚತುರ್ವಿಧೋಪಾಯದಲ್ಲಿ ಶಕ್ತನಾದರೂ ಅಶಕ್ತನಾದರೂ ಅವರ ದೋಷಗಳೆಲ್ಲವನ್ನು ಪರಿಹರಿಸಿ ತನ್ನ ಸೇವೆಗೆ ಅಧಿಕಾರಿಯಂ ಮಾಡುವ ನಿಮಿತ್ತವಾಗಿ ಶ್ರೀಮನ್ನಾರಾಯಣನೇ ಆಚಾರ್ಯನಾಗಿ ಅವತರಿಸಿ– ಇವರ ದೋಷವುಂ ತೊಳೆಯಲು ತಾನೇ ಉಪಾಯಾನುಷ್ಠಾನಂಗೈದು ರಕ್ಷಿಸುವ ಪರಮದಯಾಳುವಾಗಿ, ಗಂಭೀರನಾಗಿ ಅರ್ಥಕಾಮಪರನಲ್ಲದೆ ಸಂಸಾರನಿವರ್ತಕನಾಗಿ, ಸಂಪೂರ್ಣಕಾಮನಾಗಿ, ಜ್ಞಾನವೈರಾಗ್ಯವುಳ್ಳವನಾಗಿ, ಮೃದುಪೂರ್ವಾಭಿಭಾಷಿಯಾಗಿ, ಸರ್ವಜನ ಹಿತನಾಗಿ, ಪರತ್ವನಿರ್ಣಾಯಕನಾಗಿ, ಸತ್ವನಿಷ್ಠರಿಂದ ಸೇವಿಸಲ್ಪಡುವನಾಗಿ, ಶ್ರಿಯಃಪತಿಯಾದ ನಾರಾಯಣನನ್ನು ಸ್ವಾಧೀನಂಗೈದವನಾಗಿ, ಸತ್ವಗುಣ ಪ್ರಧಾನನಾಗಿ, ಯಥಾರ್ಥ ಜ್ಞಾನವುಳ್ಳವನಾಗಿ, ಅಭಿಜನವಿದ್ಯಾವೃತ್ತಾಭಿಮಾನಗಳೆಂಬ ದುರಾರೋಹವಾದ ಹಾಳುಭಾವಿಯೋಳ್ಬೀಳದವನಾಗಿ, ಆಕಾರತ್ರಯ ಸಂಪನ್ನನಾಗಿ, ಸ್ತನ್ಯಪಾನಂಗೈವ ಶಿಶುವಿಗೆ ವ್ಯಾಧಿಬಂದರೆ ಅದುತನಗೆ ಬಂದವ್ಯಾಧಿಯೆಂದು ಭಾವಿಸಿ ತಾನು ಔಷಧಗಳಂ ಸೇವಿಸಿ ಆ ಶಿಶುವಿನ ವ್ಯಾಧಿಯು ಹೋಗಲಾಡಿಸುವ ತಾಯಿಯಂತೆ ಆಶ್ರಿತನೊಳು ಅತಿಕೃಪಾಳುವಾಗಿ– ಇಂಥಾ ಪರಮ ಭಾಗವತನಾದ ದೇಶಿಕನ ಅಭಿಮಾನವಂ ಸಾರ್ದು ತನ್ನ ಸ್ವಾತಂತ್ರ್ಯವಂ ಬಿಟ್ಟು ತನ್ನ ಸಕಲ ಪ್ರವೃತ್ತಿ ನಿವೃತ್ತಿಗಳನ್ನು ಅವನ ಅಧೀನಮಾಡಿ, ಸಕಲಾಂಶಗಳಲ್ಲಿಯುಾ ಅವನಿಗೆ ಕ್ರಯವಿಕ್ರಯಾರ್ಹನಾಗಿ, ಇವನೊಲವೇ ಈಶ್ವರನೊಲವೆಂದು ಭಾವಿಸಿ ಇರುವ ಇರುವಿಕೆಯೇ ಆಚಾರ್ಯಾಭಿಮಾನವೆಂಬುದು. ಈಶ್ವರನು ತಾನು ಪ್ರತ್ಯೇಕವಾಗಿ ಪ್ರಾಪ್ತನಾಗಿದ್ದರೂ ಸಕಲ ದೇವತಾಂತರ್ಯಾಮಿಯಾದಂತೆ, ಈ ಆಚಾರ್ಯಾಭಿಮಾನವು ಪ್ರತ್ಯೇಕವಾಗಿ ಉಪಾಯವಾಗಿದ್ದರೂ, ಇತರೋಪಾಯಗಳಿಗೆ ಸಹಕಾರಿಯಾಗಿ ಸ್ವತಂತ್ರವಾಗಿರುವುದು.

೫– ವಿರೋಧಿವರ್ಗಗಳಲ್ಲಿ,

[೧] ಸ್ವರೂಪವಿರೋಧಿಯೆಂದರೆ ? ದೇಹದಲ್ಲಿ ಆತ್ಮಬುದ್ಧಿಯೂ, ಆತ್ಮನಲ್ಲಿ ಅನ್ಯಶೇಷತ್ವಾಭಿಮಾನವೂ, ಸ್ವಸ್ವಾತಂತ್ರ್ಯವೂ ಇವೇ ಸ್ವರೂಪವಿರೋಧಿಗಳೆನಿಸುವವು.

[೨] ಪರತ್ವವಿರೋಧಿಯೆಂದರೆ ? ದೇವತಾಂತರದಲ್ಲಿ ಪರತ್ವಪ್ರತಿಪತ್ತಿಯೂ ಸಮತ್ವಬುದ್ಧಿಯೂ, ಕ್ಷುದ್ರದೇವತಾವಿಷಯಗಳಲ್ಲಿ ಶಕ್ತಿಯೋಗಬುದ್ಧಿಯೂ, ಅವತಾರವ್ಯಕ್ತಿಗಳಲ್ಲಿ ಮಾನುಷಪ್ರತಿಪತ್ತಿಯೂ, ಅರ್ಚಾವತಾರಗಳಲ್ಲಿ ಶಕ್ತಿಯಿಲ್ಲ ಎಂದು ಭಾವಿಸುವುದು. ಇವುಗಳೇ ಪರತ್ವವಿರೋಧಿಗಳು.

[೩] ಪುರುಷಾರ್ಥವಿರೋಧಿಯೆಂದರೆ? ಇತರ ಪುರುಷಾರ್ಥಗಳಲ್ಲಿಯೂ ಮತ್ತು ತನಿಗೆ ಅಭಿಮತವಾದ ಭಗವತ್ಕೈಂಕರ್ಯಗಳಲ್ಲಿಯೂ ಆಶೆಯನ್ನಿಡುವದೇ ಪುರುಷಾರ್ಥವಿರೋಧಿಯೆನಿಸುವದು.

[೪] ಉಪಾಯವಿರೋಧಿಯೆಂದರೆ? ಉಪಾಯಾಂತರವೈಲಕ್ಷಣ್ಯಜ್ಞಾನವನ್ನೂ, ಉಪಾಯಲಾಘುವವನ್ನೂ, ಉಪೇಯಗೌರವವನ್ನೂ, ವಿರೋಧಿಬಾಹುಳ್ಯವನ್ನೂ ಭಾವಿಸುವುದೇ ಉಪಾಯ ವಿರೋಧಿಗಳೆನಿಸುವವು

[೫] ಪ್ರಾಪ್ಯ ವಿರೋಧಿಯೆಂದರೆ ? ಪ್ರಾರಬ್ಧ ಶರೀರಸಂಬಂಧವಾಗಿಯೂ, ಅನುತಾಪವಿಲ್ಲದೆ ಇರುವದಾಗಿಯೂ ಗುರುವಾಗಿಯೂ ಸ್ಥಿರವಾಗಿಯೂ ಇರುವ ಭಗವದಪಚಾರ ಭಾಗವತಾಪಚಾರ ಅಸಹ್ಯಾಪಚಾರಗಳೇ ಪ್ರಾಪ್ಯವಿರೋಧಿಗಳು. ಆಹಾರ ದೋಷವು ಜ್ಞಾನವಿರೋಧಿಯಾಗುವದು. ಸಹವಾಸದೋಷವು ಭೋಗವಿರೋಧಿಯಾಗುವದು. ಅಹಂಕಾರಾದಿಯೇ ಸ್ವರೂಪವಿರೋಧಿಯಾಗುವದು.

ಈ ವಿಧದಿಂದ ಅರ್ಥಪಂಚಕಜ್ಞಾನ ಹುಟ್ಟಿ, ಮೋಕ್ಷೇಚ್ಛೆಯುಳ್ಳವನಾಗಿ ಸಂಸಾರದಲ್ಲಿ ವರ್ತಿಸುವ ಪುರುಷನಿಗೆ ಮೋಕ್ಷಸಿದ್ಧಿಯಾಗುವ ಪರ್ಯಂತರ, ಸಂಸಾರದೊಳಿದ್ದೂ ಇಲ್ಲದವನಂತೆ ಸಾವಧಾನದಿಂದ ಕಾಲಕ್ಷೇಪವನ್ನು ಮಾಡತಕ್ಕ ಕ್ರಮವೇನೆಂದರೆ: – ವರ್ಣಾಶ್ರಮಗಳಿಗೆ ಅನುಕೂಲವಾಗಿ, ವೈಷ್ಣವಧರ್ಮಕ್ಕೂ ಅನುಸಾರವಾಗಿಯೇ ಅನ್ನವಸ್ತ್ರಾದಿಗಳನ್ನು ಸಂಪಾದಿಸಿ, ಸಕಲಪದಾರ್ಥಗಳನ್ನು ಶ್ರಿಯಃ

ಪತಿಯಾದ ನಾರಾಯಣನಿಗೆ ನಿವೇದನಂಗೈದು ಯಥಾಶಕ್ತಿ ಭಾಗವತ ಕಿಂಚಿತ್ಕಾರವಂ ಮಾಡಿ ಶರೀರಧಾರಣ ಮಾತ್ರಕ್ಕೆ ಭಗವತ್ಪ್ರಸಾದಬುದ್ಧಿಯಿಂದಲೇ ಸ್ವೀಕರಿಸಿ ಜೀವನಂಗೈದು; ತನಗೆ ತತ್ವಜ್ಞಾನವನ್ನು ಹುಟ್ಟಿಸಿದ ಆಚಾರ್ಯನ ಸನ್ನಿಧಿಯಲ್ಲಿ ಕಿಂಚಿತ್ಕಾರದಿಂದ ಅವನಿಗೆ ಅಭಿಮತವಾಗಿ ವರ್ತಿಸುತ; ಭಗವಂತನ ಸನ್ನಿಧಿಯಲ್ಲಿ ತನ್ನ ನೀಚತ್ವವನ್ನು ಬಿನ್ನವಿಸುತ; ಆಚಾರ್ಯನ ಸನ್ನಿಧಿಯಲ್ಲಿ ತನ್ನ ಅಜ್ಞತೆಯಂ ಪೊಗಳುತ; ಶ್ರೀವೈಷ್ಣವರ ಸನ್ನಿಧಿಯಲ್ಲಿ ತನ್ನ ಪಾರತಂತ್ರ್ಯವಂ ಅಡಿಗಡಿಗೆ ಅನುಸಂಧಾನಂಗೈವುತ; ಸಂಸಾರಿಗಳ ಮುಂದೆ ತನ್ನ ವ್ಯಾವೃತ್ತಿಯನ್ನು ತೋರಿಸುತ; ಪ್ರಾಪ್ಯದೊಳ್ಳೈದುವ ತವಕವೂ, ಪ್ರಾಪಕದಲ್ಲಿ ಅಧ್ಯವಸಾಯಬುದ್ಧಿಯೂ, ಇತರವಿಷಯದಲ್ಲಿ ಅರುಚಿಯೂ, ವಿರೋಧಿಯಲ್ಲಿ ಭಯವೂ, ಸ್ವರೂಪದೊಳರಿವೂ, ಸ್ವರಕ್ಷಣದಲ್ಲಿಅಶಕ್ತಿಯೂ, ಉದ್ದೇಶ್ಯವಿಷಯದಲ್ಲಿ ಗೌರವವೂ, ಉಪಕಾರವಿಷಯದಲ್ಲಿ ಕೃತಜ್ಞತೆಯೂ, ಉತ್ತಾರಕನಲ್ಲಿ ಪ್ರತಿಪತ್ತಿಯೂ ಅನುವರ್ತನವೂ ಇರ ಬೇಕು. ಈ ಪ್ರಕಾರದಿಂದ ಜ್ಞಾನಾನುಷ್ಠಾನಂ ಗೈಯುವ ಪುರುಷನು ಶ್ರಿಯಃಪತಿಯಾದ ನಾರಾಯಣನಿಗೆ ಶ್ರೀದೇವಿಗಿಂತಲೂ ನಿತ್ಯಮುಕ್ತರಗಿಂತಲೂ ಅತ್ಯಂತಾಭಿಮತನಾಗಿರುವನು.

ಅರ್ಥಪಞ್ಚಕತತ್ವಜ್ಞಾಃ ಪಞ್ಚಸಂಸ್ಕಾರಸಂಸ್ಕೃತಾಃ ।
ಆಕಾರತ್ರಯಸಮ್ಪನ್ನಾ ಮಹಾಭಾಗವತಾ ಸ್ಮೃತಾಃ ॥

ಆರ್ಯಮತಸಂಜೀವಿನಿಯ ಮೂರನೇ ಭಾಗವಾದ ಮತ
ಗ್ರಂಥಗಳಲ್ಲಿ ಎರಡನೆಯದಾದ ಅರ್ಥಪಂಚಕ
* ಸಂಪೂರ್ಣ *